# ಅಭಿವೃದ್ಧಿ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ,

ವಿದ್ಯಾರಣ್ಯ, 583276

ಅಂತರಾಷ್ಟ್ರೀಯ ಪ್ರಜಾಪ್ರಭುತ್ವದ ದಿನದ ಅಂಗವಾಗಿ

## ಸಂವಿಧಾನ ಪೀಠಿಕೆ ಓದು ಕಾರ್ಯಕ್ರಮ

ದಿನಾಂಕ: ೧೬. ೯. .೨೦೨೩, ಸಮಯ: ೧೦ ಗಂಟೆ, ಸಭಾಂಗಣ, ಅಭಿವೃದ್ಧಿ ಅಧ್ಯಯನ ವಿಭಾಗ,

ಅಂತರಾಷ್ಟ್ರೀಯ ಪ್ರಜಾಪ್ರಭುತ್ವದ ದಿನದ ಅಂಗವಾಗಿ ಕರ್ನಾಟಕ ರಾಜ್ಯ ಸರ್ಕಾರ ಪ್ರತಿ ಶಾಲೆ, ಕಾಲೇಜು ಹಾಗೂ ವಿಶ್ವವಿದ್ಯಾಲಯಗಳಲ್ಲಿ ದಿನಾಂಕ: ೧೬ ಸೆಪ್ಟಂಬರ್ ೨೦೨೩ರಂದು **ಸಂವಿಧಾನ ಪೀಠಿಕೆ ಓದು** ಕಾರ್ಯಕ್ರಮವನ್ನು ಆಯೋಜಿಸಿದ್ದರ ಭಾಗವಾಗಿ ಅಭಿವೃದ್ಧಿ ವಿಭಾಗದ ವಿಶೇಷ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

**ಕಾರ್ಯಕ್ರಮದ ಅಧ್ಯಕ್ಷತೆ: ಡಾ.ಕೆ ಗೀತಮ್ಮ**(ಮುಖ್ಯಸ್ಥರು)

**ಕಾರ್ಯಕ್ರಮದಲ್ಲಿ ಉಪಸ್ಥಿತರು**

**ಡಾ.ಜನರ್ಧನ,** ಪ್ರಾಧ್ಯಾಪಕರು.

**ಡಾ.ಶ್ರೀಧರ,** ಪ್ರಾಧ್ಯಾಪಕರು

**ಡಾ.ಗೋವರ್ಧನ,** ಪ್ರಾಧ್ಯಾಪಕರು

**ಸಂಶೋಧನಾ ವಿದ್ಯಾರ್ಥಿಗಳು**

ಕಾರ್ಯಕ್ರಮದ ನಿರೂಪಣೆ: **ಯು.ಬಸವರಾಜ, ಸಂಶೋಧನಾರ್ಥಿ**

ಸ್ವಾಗತ: **ಎಸ್.ಎಲ್.ರವಿ. ಸಂಶೋಧನಾರ್ಥಿ**

ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದವರು: **ಡಾ. ಗೋವರ್ಧನ. ಪ್ರಾಧ್ಯಪಕರು, ಅನುಷ, ದೊಡ್ಡಬಸವರಾಜ ಮಹೇಶ್, ಶಿವರಾಜ, ಮಂಜುಳ, ಯಲ್ಲೇಶ್ ಸಂಶೋಧನಾ ವಿದ್ಯಾರ್ಥಿಗಳು.**

### ಕಾರ್ಯಕ್ರಮ ಕುರಿತು.

**ಅನುಷ**: ನಮ್ಮ ದೇಶದ ಸಂವಿಧಾನ ನಮ್ಮೆಲ್ಲರ ಗ್ರಂಥವಾಗಬೇಕು. ಇಂದು ಭಾರತ ಸಂವಿಧಾನ ಗ್ರಂಥವನ್ನು ನಾವೆಲ್ಲ ಓದುವುದರ ಜೊತೆಗೆ ಕರ್ತವ್ಯಗಳನ್ನು ಪಾಲಿಸಬೇಕು. ನಮ್ಮೆಲ್ಲರಿಗೂ ಸಮಾನತೆ, ಭಾತೃತ್ವ ಧಾರ್ಮಿ, ಆರ್ಥಿಕ, ಮತ್ತು ಪ್ರಜಾಪ್ರಭುತ್ವದಲ್ಲಿ ಸಮಾನ ಹಕ್ಕುಗಳು ದೊರೆಯಬೇಕು. ಈ ಎಲ್ಲ ಅವಕಾಶಗಳು ಸಂವಿಧಾನದಲ್ಲಿ ಮಾತ್ರ ದೊರೆಯುತ್ತವೆ. ಎಲ್ಲರಿಗೂ ಸಮಾನ ಹಕ್ಕುಗಳು ದೊರೆಯುವಂತಾಗಲು ನಾವು ಸಾರ್ಥಕಗೊಳಿಸಬೇಕು ಎನ್ನುವ ಮೂಲಕ ಈ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ ಆಶಯವನ್ನು ವ್ಯಕ್ತಪಡಿಸಿದರು.

**ದೊಡ್ಡಬಸವರಾಜ್ ಎ.ಕೆ**: ಇಂದು ಕರ್ನಾಟಕ ರಾಜ್ಯ ಸರ್ಕಾರ ಆಯೋಜಿಸಿರುವ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನದ ಭಾಗವಾಗಿ ಸಂವಿಧಾನ ಪೀಠಿಕೆ ಓದು ಕಾರ್ಯಕ್ರಮ ಇತಿಹಾಸವನ್ನು ಸೃಷ್ಟಿಸುವ ಕೆಲಸವಾಗಿದೆ. ನಮ್ಮ ವಿಭಾಗದಲ್ಲಿ ಸಂವಿಧಾನದ ಪೀಠಿಕೆಯನ್ನು ಓದುವ ಕಾರ್ಯಕ್ರಮವನ್ನು ನಾವೆಲ್ಲ ಹಮ್ಮಿಕೊಂಡಿದ್ದು ತುಂಬಾ ಸಂತೋಷದ ವಿಷಯವಾಗಿದೆ. ಸಂವಿಧಾನ ನಮಗೆ ಮುಕ್ತ ಅವಕಾಶಗಳನ್ನು ನೀಡಿದೆ. ಇದಲ್ಲದೆ ನಾವು ಎಲ್ಲಾ ವಲಯದಲ್ಲಿ ಅಮೋಘ ಸಾಧನೆ ಮಾಡಲು ಅವಕಾಶವನ್ನು ಮಾಡಿಕೊಟ್ಟಿರುವುದು ನಮ್ಮ ಸಂವಿಧಾನ. ಇದರ ಭಾಗವಾಗಿ ನಾವು ಶಿಕ್ಷಣ, ವಿಜ್ಞಾನ, ಬಾಹ್ಯಕಾಶದಲ್ಲಿ ಹೋಗುವ ಮಟ್ಟಿಗೆ ಬೆಳೆದು ನಿಂತಿದ್ದೇವೆ. ಇನ್ನು ದೇಶದಲ್ಲಿರುವ ಅಸಮಾನತೆಯನ್ನು ನಾವು ತೊಲಗಿಸಬೇಕು. ಈ ನಿಟ್ಟಿನಲ್ಲಿ ನಾವೆಲ್ಲ ಕೆಲಸ ಮಾಡಬೆಕಿದೆ ಎಂದು ಮಾತನಾಡಿದರು.

**ಮಹೇಶ್**: ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನವನ್ನು ಆಚರಿಸಲು ನಮಗೆ ಅವಕಾಶ ಮಾಡಿಕೊಟ್ಟಿರುವುದಕ್ಕೆ ಧನ್ಯವಾದಗಳನ್ನು ತಿಳಿಸುತ್ತೇನೆ. ಈ ದೇಶದಲ್ಲಿ ಪ್ರಜಾಪ್ರಭುತ್ವ ಅಡಿಯಲ್ಲಿ ಎಲ್ಲಾ ಧರ್ಮಗಳು, ಜಾತಿಗಳು ಇವೆ. ಹಾಗೇನೇ ನಾವು ಎಲ್ಲಾ ರೀತಿಯಿಂದಲೂ ಹಕ್ಕುಗಳನ್ನು ಪಡೆದು ಬದುಕುತ್ತಿದ್ದೇವೆ. ಇದಕ್ಕೆ ಬಹು ಮುಖ್ಯ ಕಾರಣವೆಂದರೆ ನಮ್ಮ ಸಂವಿಧಾನ. ದೇಶದ ಸಂವಿಧಾನವನ್ನು ಬರೆದವರು ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ನಮ್ಮೆಲ್ಲರ ಪರವಾಗಿ ನಾನು ಅಭಿನಂದನೆಗಳನ್ನ ಸಲ್ಲಿಸುತ್ತೇನೆ. ಸಂವಿಧಾನ ನಮ್ಮೆಲ್ಲರ ಮಹತ್ವದ ಗ್ರಂಥವಾಗಿದೆ. ನಮ್ಮಲ್ಲಿ ಸಹೋದರತೆ, ಬಾತೃತ್ವಭಾವ, ಸಮಾನತೆ, ಪ್ರಜಾಪ್ರಭುತ್ವದ ಹಕ್ಕುಗಳು ಮತ್ತು ಆರ್ಥಿಕ ಹಕ್ಕುಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಎಲ್ಲಾ ರೀತಿಯ ಅವಕಾಶಗಳನ್ನು ಕೊಟ್ಟಿದೆ. ಈ ಮಹಾ ಸಂವಿಧಾನವನ್ನು ನಾವು ರಕ್ಷಿಸಬೇಕಾಗಿದೆ. ನಮ್ಮಲ್ಲಿ ವರ್ಗಗಳ ಆಧಾರದಲ್ಲಿ ಸಂವಿಧಾನವಿಲ್ಲ ಎಲ್ಲರಿಗೂ ಒಂದೇ ಸಂವಿಧಾನ. ನಮ್ಮಲ್ಲಿ ಎಲ್ಲರಿಗೂ ಶಿಕ್ಷಣವಿದೆ. ಬದುಕುವ ಹಕ್ಕು ಎಲ್ಲರಿಗೂ ಇದೆ. ಹಾಗಾಗಿ ತಮ್ಮ ಸಂವಿಧಾನದಲ್ಲಿ ಯಾವುದೇ ತಾರತಮ್ಯದ ಅವಕಾಶಗಳು ನಮಗೆ ಕಾಣುವುದಿಲ್ಲ ಈ ನಿಟ್ಟಿನಲ್ಲಿ ನಾವು ನಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳಬೇಕು ಎಂದು ಹೇಳಿದರು.

**ಮಂಜುಳ**: ಜಗತ್ತಿನಲ್ಲಿ ಅತ್ಯಂತ ದೊಡ್ಡ ಸಂವಿಧಾನವೆಂದರೆ ಅದು ಭಾರತ ಸಂವಿಧಾನ. ನಾವು ಪ್ರಜಾಪ್ರಭುತ್ವದ ಬಹುದೊಡ್ಡ ಅಂಗವಾಗಿ, ನಮ್ಮ ಸಂವಿಧಾನ ನಮ್ಮ ರಕ್ಷಣೆಗೆ ನಿಂತಿದೆ. ಹಾಗಾಗಿ ಇಂದು ನಾವು ಸಂವಿಧಾನದ ಪೀಠಿಕೆಯನ್ನು ಓದುತ್ತಿದ್ದೇವೆ. ಇದು 448 ವಿಧಿಗಳನ್ನ, 12 ಅನುಚ್ಛೇದಗಳನ್ನ 101 ತಿದ್ದುಪಡಿಗಳನ್ನು ಒಳಗೊಂಡಿದೆ. ಜನವರಿ 26ರಂದು 1950ರ ಜಾರಿಗೆ ಬಂದಿದ್ದರಿಂದ ನಾವು ಗಣರಾಜ್ಯ ದಿನವನ್ನಾಗಿ ಆಚರಿಸುತ್ತಿದ್ದೇವೆ. ನವಂಬರ್ 26ರಂದು ಸಂಸತ್ತಿನಲ್ಲಿ ಸಂವಿಧಾನವನ್ನು ಮಂಡಿಸಿ ಅಂಗೀಕರಿಸಲಾಗಿದೆ. ಇದರ ಎಲ್ಲಾ ಯಶಸ್ಸಿಗೆ ಕಾರಣರಾದವರು ಡಾ.ಬಿ.ಆರ್.ಅಂಬೇಡ್ಕರ್ ಇಂದು ನಾವು ಸಂವಿಧಾನದ ಪೀಠಿಕೆಯನ್ನು ಓದುತ್ತಿರುವುದು ಬಹಳ ಖುಷಿ ವಿಚಾರವಾಗಿದೆ. ಹಾಗೂ ಇದು ಎಲ್ಲರಿಗೂ ತಲುಪುವಂತ ಪ್ರಯತ್ನವಾಗಬೇಕು ಎಂದು ಮಾತನಾಡಿದರು.

**ಯಲ್ಲೇಶ್**: ಎಲ್ಲರಿಗೂ ರಾಷ್ಟ್ರೀಯ ಸಂವಿಧಾನ ಮತ್ತು ಪ್ರಜಾಪ್ರಭುತ್ವ ದಿನದ ಶುಭಾಶಯಗಳು. ನಮ್ಮ ದೇಶ ಅರಸರ ಆಳ್ವಿಕೆಯಿಂದ, ಪಾಳೆಗಾರಿ ವ್ಯವಸ್ಥೆಯಿಂದ ಇಂದು ಪ್ರಜೆಗಳ ಆಳ್ವಿಕೆಗೆ, ಅಂದರೆ ನಮ್ಮದೇ ಆದ ನಾಗರಿಕತೆಯನ್ನು ನಾವು ಕಟ್ಟಿಕೊಂಡು ಬದಲಾವಣೆಯಾಗುತಿದ್ದೇವೆ ಎಂದರೆ ಇದಕ್ಕೆಲ್ಲ ಸಂವಿಧಾನವೇ ಕಾರಣ. ಇಂದು ಸಂವಿಧಾನ ಓದು ಕಾರ್ಯಕ್ರಮದಲ್ಲಿ ಒಂದು ಕೋಟಿ ಜನ ನೊಂದಣಿಯನ್ನು ಪಡೆದಿದ್ದಾರೆ. ಆದರೆ ನಮ್ಮಲ್ಲಿರುವುದು ಆರು ಕೋಟಿ ಜನ. ಆಗಿದ್ದರೆ ಇನ್ನೂ ಐದು ಕೋಟಿ ಜನರಿಗೆ ಈ ಕಾರ್ಯಕ್ರಮ ತಲುಪಿಲ್ಲ ಎಂದರ್ಥ

ಹಾಗಾಗಿ ಇದನ್ನ ತಲುಪಿಸುವಂತಹ ಪ್ರಯತ್ನಗಳನ್ನು ನಾವು ಮಾಡಬೇಕಿದೆ. ಎಲ್ಲರಿಗೂ ತಲುಪಿಸುವ ಕೆಲಸಕ್ಕೆ ಸರ್ಕಾರ ಮುನ್ನಡೆ ಇಡಬೇಕಾಗಿದೆ. ಈ ರಾಜ್ಯದಲ್ಲಿರುವ ಪ್ರತಿಯೊಬ್ಬ ಮಂತ್ರಿಗಳು ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಿದೆ. ಮತ್ತೊಂದು ಕಡೆ ಜನಸಾಮಾನ್ಯರಿಗೆ ತಲುಪಬೇಕಿದೆ. ಯುವ-ನಾಗರಿಕ, ಯುವ-ಭಾರತವನ್ನು ಕಟ್ಟಬೇಕು. ಪ್ಲೇಟೋ ಅವರು ಹೇಳುವಂತೆ 'ನಾವು ಯಾರಿಗೂ ಅರ್ಥ ಆಗದಿರುವ ರೀತಿಯಲ್ಲಿ ಸಣ್ಣ ಅಕ್ಷರಗಳನ್ನ ಬರೆಯಬಾರದು, ಎಲ್ಲರಿಗೂ ಅರ್ಥ ಆಗುವ ರೀತಿ ದೊಡ್ಡ ಅಕ್ಷರಗಳನ್ನು ಬರೆಯಬೇಕು' ಹೇಳಿದ್ದಾರೆ ಅಂದರೆ ನಮ್ಮ ವಿಚಾರಗಳು ಎಲ್ಲರಿಗೂ ತಲುಪುವಂತೆ ಹೇಳಬೇಕು ಎಂದರು.

**ಡಾ.ಗೋವರ್ಧನ**: ನಮ್ಮ ದೇಶದಲ್ಲಿ ಸಂವಿಧಾನ ಮತ್ತು ಪೀಠಿಕೆಯನ್ನು ಓದುವುದೆಂದರೆ ಇದು ಗಂಭೀರವಾದ ವಿಷಯವೇ ಹೌದು. 1945 ರಿಂದ ಹಿಂದಿನವರೆಗೆ 76 ವರ್ಷಗಳು ಸಂದಿವೆ. ಇಂದಿಗೂ ಬದಲಾವಣೆ ಇದೆ ಎಂದರೆ ಎಷ್ಟರಮಟ್ಟಿಗಿದೆ ಎಂದು ನಾವು ನೋಡಬೇಕು. ದೇಶದಲ್ಲಿ ಯಾರ ಸುಧಾರಣೆಯಾಗಿದೆ?. ಯಾರು ಅಭಿವೃದ್ಧಿಯಾಗುತಿದ್ದಾರೆ? ಅವಕಾಶಗಳು ಯಾರಿಗೆ ತಲುಪಬೇಕಾಗಿದೆಯೋ ಅವರಿಗೆ ಅವಕಾಶಗಳು ತಲುಪುತ್ತಿಲ್ಲ. ಎಲ್ಲಾ ವಿಷಯಕ್ಕೂ ಕಾನೂನು ಚೌಕಟ್ಟುಗಳಿವೆ, ನಾವು ಕಾನೂನು ಚೌಕಟ್ಟಿನಲ್ಲಿ ನಾವೆಲ್ಲರೂ ಬದುಕುತ್ತಿದ್ದೇವೆ. ಇವತ್ತು ಸಾಮಾನ್ಯ ಜನರಿಗೆ ಸಂವಿಧಾನ ಬರೆದವರು ಯಾರೆಂದು ಗೊತ್ತಿಲ್ಲ. ಸವಿಧಾನದ ಕರ್ತವ್ಯಗಳು ಗೊತ್ತಿಲ್ಲ. ಸಂವಿಧಾನದ ಕರ್ತವ್ಯಗಳನ್ನು ನಾವೆಲ್ಲರೂ ಪಾಲಿಸಬೇಕಿದೆ. ಈ ಹಿನ್ನೆಲೆಯಲ್ಲಿ ನಾವು ಹೊಸ ಸಮಾಜವನ್ನು ನಿರ್ಮಿಸುವ ಹೃದಯವಂತರಾಗಬೇಕು. ಹೃದಯದಿಂದ ನಾವು ಕೆಲಸ ಮಾಡಬೇಕಿದೆ. ನಮ್ಮ ಹೃದಯ ಬಡಿಯುವುದು ನಿಂತರೆ ನಮ್ಮ ದೇಹ ಸತ್ತಂತೆ, ಹಾಗೇನೇ ಸಮಾಜದಲ್ಲಿ ಕರ್ತವ್ಯಗಳು ನಿಂತರೆ ಆ ಸಮಾಜ ನಾಶವಾಗುತ್ತದೆ ಎಂದು ಮಾತನಾಡಿದರು.

**ಕಾರ್ಯಕ್ರಮದ ಅಧ್ಯಕ್ಷರು: ಡಾ.ಕೆ.ಗೀತಮ್ಮ, ಮುಖ್ಯಸ್ಥರು**

ಇಂದು ಸರ್ಕಾರ ಎಲ್ಲಾ ಕಛೇರಿಗಳಲ್ಲಿ ಸಂವಿಧಾನ ಪೀಠಿಕೆ ಓದು ಕಾರ್ಯಕ್ರಮಕ್ಕೆ ಕರೆಕೊಟ್ಟಿದೆ. ಅದರ ಭಾಗವಾಗಿ ನಾವು ಇಂದು ನಮ್ಮ ವಿಭಾಗದಲ್ಲಿ ಸಂವಿಧಾನ ಪೀಠಿಕೆ ಓದು ಕಾರ್ಯಕ್ರಮ ಹಮ್ಮಿಕೊಂಡು ತಾವೆಲ್ಲಾರು ಉದ್ದೇಶಿಸಿ ಮಾತನಾಡಿದ್ದೀರಿ. ಈ ಕಾರ್ಯಕ್ರಮಕ್ಕೆ ಬಹುತೇಕರು ನೋಂದಣಿ ಮಾಡಿಕೊಂಡಿದ್ದಾರೆ. ಆದರೆ ಇದು ಕೇವಲ ಶಾಲಾ ಕಾಲೇಜುಗಳಲ್ಲಿ ಮಾತ್ರವಿದೆ. ಹಾಗೂ ಇದರಿಂದ ವಿದ್ವತ್ ಇರುವವರಿಗೆ ಮಾತ್ರ ಗೊತ್ತಾಗುತ್ತದೆ. ಆದರೆ ಈ ಕಾರ್ಯಕ್ರಮದಲ್ಲಿ ಎಲ್ಲರೂ ಭಾಗವಹಿಸಲು ಅವಕಾಶ ನೀಡಬೇಕಿದೆ. ಓದಿದವರಿಗೆ ಮತ್ತೆ ಮತ್ತೆ ಓದಿಸುವುದು ಆದರೆ ಓದದಿದ್ದವರಿಗೂ ನಾವೆಲ್ಲರೂ ಓದಿಸುವ ಪ್ರಯತ್ನ ಮಾಡಬೇಕಿದೆ. ಇಂದಿನ ವಿದ್ಯಾರ್ಥಿಗಳು ಕಲಿಯುವುದರ ಜೊತೆಗೆ ಬದಲಾಗಬೇಕೆ ಹಾಗೂ ಕೌಶಲ್ಯಗಳನ್ನು ಅಳವಡಿಸಿಕೊಳ್ಳಬೆಕು. ಯಾವುದೋ ಒಂದಕ್ಕೆ ಸೀಮಿತವಾಗಬಾರದು. ಹೊಸ ಜಗತ್ತಿಗೆ ತೆರದುಕೊಳ್ಳಬೇಕು ಹಾಗ ಕಲಿಯುವ ವಿಧಾನಗಳು ಬದಲಾಗುತ್ತದೆ ಎಂದು ಮಾತನಾಡಿದರು.



ಸಂವಿಧಾನ ಪೀಠಿಕೆ ಓದು ಪ್ರತಿಜ್ಞೆ



ಅಧ್ಯಕ್ಷಿಯ ನುಡು: ಕೆ.ಗೀತಮ್ಮ. ಮುಖ್ಯಸ್ಥರು.

**ಕಾರ್ಯಕ್ರಮದಲ್ಲಿ ಭಾಗವಹಿದ ಎಲ್ಲರಿಗೂ ಧನ್ಯವಾದ .**

# ಅಭಿವೃದ್ಧಿ ಅಧ್ಯಯನ ವಿಭಾಗ

## ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿದ್ಯಾರಣ್ಯ–೫೮೩೨೭೬

## ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ

**ದಿನಾಂಕ: ೧೨.೦೯.೨೦೨೩**

**ಸ್ಥಳ: ಅಭಿವೃದ್ಧಿ ಅಧ್ಯಯನ ವಿಭಾಗದ ಸಭಾಂಗಣ.**

**ಅಧ್ಯಕ್ಷತೆ ಮತ್ತು ಪ್ರಾಸ್ತವಿಕ**
**ಡಾ.ಗೀತಮ್ಮ**
**ಮುಖ್ಯಸ್ಥರು, ಅಭಿವೃದ್ಧಿ ಅಧ್ಯಯನ ವಿಭಾಗ, ಕವಿಹಂ**

ಡಾ.ಶ್ರೀಧರ, ಪ್ರಾಧ್ಯಾಪಕರು
ಡಾ. ಎಚ್.ಡಿ.ಪ್ರಶಾಂತ, ಪ್ರಾಧ್ಯಾಪಕರು
ಡಾ.ಜನಾರ್ಧನ, ಪ್ರಾಧ್ಯಾಪಕರು
ಡಾ.ಗೋವರ್ಧನ, ಸಹಾಯಕ ಪ್ರಾಧ್ಯಾಪಕರು

ಕಾರ್ಯಕ್ರಮದ ನಿರೂಪಣೆ
ಯರಿಸ್ವಾಮಿ ಎಚ್

ಸ್ವಾಗತ
ಯು.ಬಸವರಾಜ

ವಂದನಾರ್ಪಣೆ
ಶರಣು ಗೊಲ್ಲರ